**ಅಸಲು ದಾವಾ ನಂ:63/2014**
**ಪಿ.ಡಬ್ಲ್ಯೂ- 01**

**<u>ದಿನಾಂಕ:04.08.2022 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಸಂಖ್ಯೆ.13 ರಿಂದ 14 ರ ಆದೇಶದ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಜಿ.ಆರ್.ಎ., 2 ನೇ ಪ್ರತಿವಾದಿ ಪರ ವಕೀಲರಿಂದ</u>**

2. ನಾನು ಈ ದಾವೆಯನ್ನು ಭೀಮಪ್ಪ, ದೊಡ್ಡೀರಪ್ಪ ಇವರ ಮೇಲೆ ದಾಖಲಿರುತ್ತೇನೆ. ಈ ದಾವೆಯನ್ನು ಅವರ ವಿರುದ್ಧ ಜಮೀನಿಗೆ ತೊಂದರೆ ಕೊಡದಂತೆ ದಾಖಲಿಸಿರುತ್ತೇನೆ. ದಾವಾ ಜಮೀನಿನ ಸರ್ವೆ ನಂಬರ್ 86/3 ಎ ಅಂತ ಇದ್ದು ಅದರ ವಿಸ್ತೀರ್ಣ 20 ಗುಂಟೆ ಇರುತ್ತದೆ. ಸರ್ವೆ ನಂಬರ್ 86/3 ರಲ್ಲಿ 20 ಗುಂಟೆಯನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇರುವುದಿಲ್ಲ. ಸರ್ವೆ ನಂಬರ್ 86/3 ಕ್ಷೇತ್ರ 20 ಗುಂಟೆ ಜಮೀನು ಇದೆ ಅಂತ ತೋರಿಸಲು ನ್ಯಾಯಾಲಯಕ್ಕೆ ಪಹಣಿ ಮತ್ತು ಪಟ್ಟಾ ಪುಸ್ತಕವನ್ನು ಹಾಜರುಪಡಿಸಿರುತ್ತೇನೆ.

ಪ್ರಶ್ನೆ:- 20 ಗುಂಟೆ ಜಮೀನಿನಲ್ಲಿ ಎಷ್ಟು ಜನ ಮನೆ ಕಟ್ಟಿಕೊಂಡಿರುತ್ತಾರೆ?

ಉತ್ತರ:- ಯಾರು ಮನೆ ಕಟ್ಟಿಕೊಂಡಿರುವುದಿಲ್ಲ.

3. ದಾವಾ ಸ್ವತ್ತು ಮೂಲತಃ ನನ್ನ ತಾತ ತಿಮ್ಮಯ್ಯ ತಂದೆ ತಿಪ್ಪಯ್ಯ ಇವರಿಗೆ ಸೇರಿತ್ತು. ನನ್ನ ತಾತ ತಿಮ್ಮಯ್ಯ ತಂದೆ ತಿಪ್ಪಯ್ಯ ಇವರಿಗೆ ಒಬ್ಬ ಗಂಡು ಮಗ ಮತ್ತು ಮೂರು ಜನ ಹೆಣ್ಣು ಮಕ್ಕಳು. ಗಂಡು ಮಗನ ಹೆಸರು ತಿಪ್ಪಯ್ಯ ಅಂದರೆ ನನ್ನ ತಂದೆ. ಹೆಣ್ಣು ಮಕ್ಕಳ ಹೆಸರು 1) ತಿಪ್ಪಮ್ಮ, 2) ಕೆಂಚಮ್ಮ ಮತ್ತು 3) ರುದ್ರಮ್ಮ. ತಿಪ್ಪಮ್ಮ, ಕೆಂಚಮ್ಮ ಮತ್ತು ರುದ್ರಮ್ಮ ಈಗ ಜೀವಂತ ಇರುವುದಿಲ್ಲ. 1987-88 ನೇ ಇಸವಿಯಲ್ಲಿಯೇ ಮೇಲಿನ ಮೂರು ಜನ ಹೆಣ್ಣು ಮಕ್ಕಳು ತೀರಿಕೊಂಡಿದ್ದರು. 1987-88 ನೇ ಇಸವಿಯಲ್ಲಿ ನನ್ನ ತಂದೆ ಜೀವಂತ ಇದ್ದರು. 1987-88 ನೇ ಇಸವಿಯಲ್ಲಿ ನನ್ನ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಳ್ಳುವಾಗ ನನ್ನ ತಾತ ತಿಮ್ಮಯ್ಯನ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ತಂದೆಯ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

4. ನಾನು ಪೌತಿ ಖಾತೆ ಮಾಡಿಸಿಕೊಳ್ಳುವ ಅರ್ಜಿಯಲ್ಲಿ ತಿಮ್ಮಯ್ಯ ಪೌತಿಯಾಗಿರುತ್ತಾನೋ ಅಥವಾ ನನ್ನ ತಂದೆ ತಿಪ್ಪಯ್ಯ ಪೌತಿ ಆಗಿರುವ ಕಾರಣಕ್ಕೆ ಖಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಕೊಟ್ಟಿದ್ದೇನು ಎಂದರೆ ಸಾಕ್ಷಿಯು ಎರಡಕ್ಕೂ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು 1987-88 ನೇ ಇಸವಿಯಲ್ಲಿ ಸುಳ್ಳು ಮಾಹಿತಿ ನೀಡಿ ನನ್ನ ಮತ್ತು ನನ್ನ ತಮ್ಮ 2 ನೇ ಪ್ರತಿವಾದಿ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ಕೆ.ರುದ್ರಪ್ಪ ಮತ್ತು ಕಾಟಪ್ಪ ಎಂದರೆ ಯಾರು ಅಂತ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಬೇರೆಯವರು ಎಂದು ನುಡಿಯುತ್ತಾರೆ. ತಿಪ್ಪಯ್ಯ ತಂದೆ ಬಂಗಾರಪ್ಪ, ಅಯ್ಯಪ್ಪ ತಂದೆ ಬಂಗಾರಪ್ಪ, ವರಗ ಚಂದ್ರಪ್ಪ ತಂದೆ ಬಂಗಾರಪ್ಪ ನನಗೆ ಚಿಕ್ಕಪ್ಪಂದಿರಾಗಬೇಕು ಎಂದರೆ ಸರಿ.

6. ನನ್ನ ತಾತ ತಿಮ್ಮಯ್ಯನಿಗೆ ನಾಲ್ಕು ಜನ ಗಂಡು ಮಕ್ಕಳಿದ್ದರೂ ಅವರುಗಳೆಂದರೆ 1) ಅಯ್ಯಪ್ಪ, 2) ತಿಮ್ಮಪ್ಪ, 3) ಚಂದ್ರಪ್ಪ ಮತ್ತು 4) ಮುಕ್ಕಪ್ಪ. 1987-88 ನೇ ಇಸವಿಯಲ್ಲಿ ಪೌತಿ ಖಾತೆ ಮಾಡಿಸಿಕೊಳ್ಳುವಾಗ ತಿಮ್ಮಯ್ಯನಿಗೆ ಎಷ್ಟು ಜನ ಗಂಡು ಮತ್ತು ಹೆಣ್ಣು ಮಕ್ಕಳು ಅಂತ ಮಾಹಿತಿ ನೀಡದೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಅವರು ಬೇರೆ ನಾವು ಬೇರೆ ಎಂದು ನುಡಿಯುತ್ತಾರೆ.

7. 1) ಅಯ್ಯಪ್ಪ, 2) ತಿಮ್ಮಪ್ಪ, 3) ಚಂದ್ರಪ್ಪ ಮತ್ತು 4) ಮುಕ್ಕಪ್ಪ ಇವರುಗಳು ಜಮೀನುಗಳಿಗೆ ಸಂಬಂಧಿಸಿದಂತೆ ಪಾಲುವಿಭಾಗ ಮಾಡಿಕೊಂಡಿದ್ದರಾ ಎಂದರೆ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ.

**(ಮುಂದುವರೆದ ಪಾಟೀ ಸವಾಲನ್ನು ನ್ಯಾಯಾಲಯದ ಸಮಯ ಮುಂದುವರೆಯುತ್ತಾ ಬಂದಿರುವುದರಿಂದ ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.